INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -5, September-October, 2023,
PageNo,36-48
Peer -Reviewed, Refereed Journal

# ಜನಸಾಮಾನ್ಯರ ಕವಿ ಸರ್ವಜ್ಞ

ಡಾ.ಯೋಗೇಶ ಎನ್.[1]

ವಿಶ್ವಬಾಂಧವ್ಯದ ತಥ್ಯವನ್ನು ಕಂಡುಕೊಂಡ ಕೆಲವೇ ಕನ್ನಡ ಕವಿಗಳಲ್ಲಿ ಸರ್ವಜ್ಞನೊಬ್ಬನು. ಕವಿಯಾಗಿ ಆತ ರವಿ ಕಾಣದ ದರ್ಶನವನ್ನು ತ್ರಿಪದಿಯೆಂಬ ಪುಟ್ಟ ಶರೀರದ ಮೂಲಕ ಪರಿಣಾಮಕಾರಿಯಾಗಿ ಕಂಡರಿಸಿದನು. ಕ್ರಾಂತಿಪುರುಷನಂತೆ ಕಂಡನು. ಸಮಾಜದ ಹುಳುಕುಗಳನ್ನು ನಿರ್ಭೀತಿಯಿಂದ ಟೀಕಿಸಿದನು. ಹಿರಿಯ ತತ್ವಜ್ಞಾನಿ, ಆಧ್ಯಾತ್ಮವಾದಿ, ರಸಿಕ ಶಿಖಾಮಣಿ, ವ್ಯವಹಾರ ಕುಶಲಿಯಾಗಿ ಸಮಾಜ ಸುಧಾರಕನಾಗಿ ಸರ್ವಜ್ಞ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟವಾಗಿ ಕಂಡುಬರುವುದುಂಟು. ಸರ್ವಜ್ಞನ ವಚನಗಳಿಲ್ಲದ ಕನ್ನಡ ಸಾಹಿತ್ಯವನ್ನು ಕೋಗಿಲೆಗಳಿರದ ಅರಣ್ಯವೆಂದೂ ದುಂಬಿಗಳ ಝೇಂಕಾರವಿಲ್ಲದ ವನವೆಂದೂ ತಿಳಿಯಬಹುದು.

ತಮಿಳು ಭಾಷೆಯಲ್ಲಿ ತಿರುವಳ್ಳುವರ್, ತೆಲುಗು ಸಾಹಿತ್ಯದಲ್ಲಿ ವೇಮನ, ಮರಾಠಿಯಲ್ಲಿ ರಾಮದಾಸ ಮುನಿ, ಹಿಂದಿಯಲ್ಲಿ ಕಬೀರದಾಸ ಅವರು ಅಲ್ಲಿ ಯಾವ ಸ್ಥಾನವನ್ನು ಪಡೆದು ಇಂದಿಗೂ ಜನಸಮಾನಸದಲ್ಲಿ ಬೇರೂರಿದ್ದಾರೆಯೋ ಅದೇ ಬಗೆಯಲ್ಲಿ ಕನ್ನಡದ ನೆಲದಲ್ಲಿ ಸರ್ವಜ್ಞನು ಕನ್ನಡಿಗರ ಮನದಲ್ಲಿ ನೆಲೆಯೂರಿದ್ದಾನೆ. 'ಸಾಹಿತ್ಯವೆಂದರೆ ಜನಜೀವನದ ಪ್ರತಿಬಿಂಬ' ಎನ್ನುವುದನ್ನು ಅಕ್ಷರಷಃ ತೋರಿಸಿಕೊಟ್ಟ ಕವಿ ಸರ್ವಜ್ಞ, ರಾಜಾಶ್ರಯದ ಹಂಗಿಲ್ಲದೆ, ಗುರುಮನೆಗಳ ಆಶ್ರಯವಿಲ್ಲದೆ ಲೋಕವನ್ನೆ ನೆಲೆಮನೆಯಾಗಿಸಿಕೊಂಡು, ತಾನು 'ನೆಲೆ'ಯಾಗಿಸಿಕೊಂಡ ಸಮಾಜದಿಂದಲೇ ಕಲಿತ ಬದುಕಿನ ಪಾಠಗಳನ್ನು ಅದೇ ಸಮಾಜವನ್ನು ತಿದ್ದಲು ವಚನ–ತ್ರಿಪದಿಗಳನ್ನು ಕಲಾತ್ಮಕವಾಗಿ ಬಳಸಿಕೊಂಡ ಕವಿ ಈತ. ತನ್ನ ಅಭಿವ್ಯಕ್ತಿಗಾಗಿ ಸರಳವಾದ ಭಾಷೆ, ನುಡಿಗಟ್ಟುಗಳನ್ನು ಬಳಸಿ 'ಜನತೆಯ ಕವಿ' ಯೆನಿಸಿಕೊಂಡವನು.

**ಕಾಲ :**

[1].ಸಹಸಂಪಾದಕ,ವಿಶ್ವಕೋಶ ವಿಭಾಗ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ, ಮೈಸೂರು

ಸರ್ವಜ್ಞನ ಕಾಲನಿರ್ಣಯವು ಜಟಿಲವಾದುದಾಗಿದೆ. ಅನೇಕ ವಿದ್ವಾಂಸರು ಆ ಕುರಿತು ಸಾಕಷ್ಟು ಚರ್ಚಿಸಿದ್ದಾರೆ. ಸರ್ವಜ್ಞನು ೧೬ನೆಯ ಶತಮಾನಕ್ಕೂ ಹಿಂದಿನವನು ಎಂಬ ಮತವನ್ನು ಇ.ಪಿ. ರೈಸ್ ಅವರು ಒಪ್ಪಿರುವರಲ್ಲದೆ, ಚೆನ್ನಪ್ಪ ಉತ್ತಂಗಿಯವರೂ ಇದನ್ನು ಸಮರ್ಥಿಸಿದ್ದಾರೆ. 'ಕಾಲಜ್ಞಾನಪದ್ಧತಿ'ಯ ವಚನಗಳಲ್ಲಿ ಪ್ರಸ್ತಾಪಿಸಲ್ಪಟ್ಟಿರುವ ವಿಜಯನಗರದ ವಿನಾಶ (ಕ್ರಿ.ಶ. ೧೫೬೫), ಇಕ್ಕೇರಿ ಸಂಸ್ಥಾನದ ಪತನ (ಕ್ರಿ.ಶ. ೧೭೬೩), ಶ್ರೀರಂಗಪಟ್ಟಣ ಇಂಗ್ಲಿಷರ ಕೈವಶವಾದುದು (ಕ್ರಿ.ಶ.೧೭೯೯) ಈ ಮೊದಲಾದ ಚಾರಿತ್ರಿಕ ಸಂಗತಿಗಳನ್ನು ಆಧರಿಸಿ ಸರ್ವಜ್ಞನ ಕಾಲ ಕ್ರಿ.ಶ. ೧೮೦೦ ಎಂದು ರೆವರೆಂಡ್ ಎಫ್.ಕಿಟಲ್ ಅವರು ನಿರ್ಧರಿಸುತ್ತಾರೆ. ಆದರೆ ಕಾಲಜ್ಞಾನದ ವಚನಗಳು ಪ್ರಕ್ಷಿಪ್ತವಾಗಿರುವ ಪ್ರಮಾಣ ಹೆಚ್ಚು ಎನ್ನುವ ಅಭಿಪ್ರಾಯವಿದೆ. ಬಿ.ಶಿವಮೂರ್ತಿಶಾಸ್ತ್ರಿಗಳು ನಾಲ್ಕು ಜನ ಸರ್ವಜ್ಞರಿರಬೇಕೆಂದು ಊಹಿಸಿ ತ್ರಿಪದಿಗಳನ್ನು ರಚಿಸಿದ ಸರ್ವಜ್ಞಮೂರ್ತಿಯು ಸಂಪಾದನೆಯ ಸಿದ್ಧವೀರಣಾರ್ಯರಿಗೆ (ಸು.ಕ್ರಿ.ಶ. ೧೬೦೦) ಹಿಂದಿನವನಾಗಿರಬೇಕೆಂಬ ವಾದಕ್ಕೆ ಮನ್ನಣೆ ನೀಡಿದ್ದಾರೆ. ಹಾಗಾಗಿ ಅನೇಕ ಮಂದಿ ಸಂಶೋಧಕರ ನಡುವೆಯೇ ಈ ಬಗೆಯ ಭಿನ್ನಾಭಿಪ್ರಾಯಗಳಿರುವುದರಿಂದ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಿರುವುದರಿಂದ ಸರ್ವಜ್ಞನು ಕ್ರಿ.ಶ. ೧೬೦೦ ಕ್ಕಿಂತ ಪೂರ್ವದಲ್ಲಿ ಜೀವಿಸಿರಬೇಕೆಂದು ಊಹಿಸಬಹುದು.

**ಜೀವನ :** ಸರ್ವಜ್ಞನ 'ಕಾಲ'ದ ವಿಚಾರವಾಗಿ ಹೇಗೆ ತೊಡಕುಗಳಿವೆಯೋ ಅದೇ ರೀತಿ ಆತನ ಹುಟ್ಟಿನ ಹಿನ್ನೆಲೆ ಬಗ್ಗೆಯೂ ತೊಡಕುಗಳಿವೆ. ಕವಿಕೃತವೋ, ಅನ್ಯಕೃತವೋ ಎಂಬುದು ಚರ್ಚೆಗೀಡಾಗಿರುವ ಸರ್ವಜ್ಞನ ಜನ್ಮವೃತ್ತಾಂತದಲ್ಲಿ ಕಾಣಿಸಿಕೊಳ್ಳುವ ತಾಯಿ–ತಂದೆಯರ ಊರುಗಳ ನೇರ ಉಲ್ಲೇಖ, ಕವಿಯ ವಚನಗಳಲ್ಲಿ ಕಾಣಿಸಿಕೊಳ್ಳುವ ವಿವರಗಳು, ಭಾಷೆ–ಮೊದಲಾದವುಗಳನ್ನು ಆಧರಿಸಿ, ಉತ್ತಂಗಿ ಚನ್ನಪ್ಪನವರು ಸರ್ವಜ್ಞನ ಜನ್ಮಸ್ಥಳ ಅಂಬಲೂರು ಎಂದಿದ್ದಾರೆ. ಇದು ಇಂದಿನ ಅಬ್ಬಲೂರು. ಧಾರವಾಡ ಜಿಲ್ಲೆಯ ಹಿರೇಕೇರೂರಿಗೆ ಸಮೀಪದಲ್ಲಿರುವ ಒಂದು ಊರು. ಆತನ "ತಂದೆ ಬಸವರಸನ ಮಾಸೂರು, ಇಲ್ಲಿಂದ ಆರು ಮೈಲಿಗಳ ಅಂತರದಲ್ಲಿದೆ. ಈ ಮಾಸೂರು, ಧಾರವಾಡ ಜಿಲ್ಲೆ ಮತ್ತು ಹಳೆಯ ಮೈಸೂರು ಸಂಸ್ಥಾನದ ನಡುವೆ ಇದ್ದಿರುವ ಗಡಿನಾಡಿನ ಒಂದು ಹಳ್ಳಿಯಾಗಿದೆ". ಇದು ಹೌದೆಂದಾರೆ ಸರ್ವಜ್ಞ, ಮಲೆನಾಡಿಗೆ ಸೇರಿದ ಅಬ್ಬಲೂರು–ಮಾಸೂರುಗಳ ಪರಿಸರದಲ್ಲಿ ಹುಟ್ಟಿ ಬೆಳೆದವನೆಂದು ತಿಳಿಯಬೇಕಾಗುತ್ತದೆ. ಒಟ್ಟಾರೆ ವಿವಾದಾಸ್ಪದವಾದ ಈ ಜನ್ಮವೃತ್ತಾಂತವನ್ನು, ಗ್ರಂಥಸ್ಥ ಪದ್ಯಗಳು ಮತ್ತು ಜನಜನಿತವಾಗಿರುವ ಕತೆಯ ಆಧಾರದಿಂದ ಉತ್ತಂಗಿ ಚನ್ನಪ್ಪನವರು ನಿರೂಪಿಸಿದ್ದಾರೆ.

ಧಾರವಾಡ ಜಿಲ್ಲೆಯ ಮಾಸೂರು ಗ್ರಾಮದ ಬಸವರಸನೆಂಬ ಆರಾಧ್ಯ ಬ್ರಾಹ್ಮಣ ತನ್ನ ಪತ್ನಿ ಮಲ್ಲಮ್ಮ ಮಕ್ಕಳಿಲ್ಲವೆಂದು ದುಃಖಿಸುತ್ತಿರಲು ಪುತ್ರಾಕಾಂಕ್ಷಿಯಾಗಿ ಕಾಶಿಯ ವಿಶ್ವನಾಥನ ಸನ್ನಿಧಿಯಲ್ಲಿ ತಪಗೈದು ವರ ಪಡೆದು ಸಂತೋಷದಿಂದ ಊರಿಗೆ ಹಿಂದಿರುಗುತ್ತಿದ್ದನು. ದಾರಿಯಲ್ಲಿ ಅಂಬಲೂರಿಗೆ

ಬಂದು ಮಾರ್ಗಾಯಾಸದಿಂದ ಮಾಳಿ ಎಂಬ ಕುಂಬಾರ ವಿಧವೆಯ ಮನೆಯಲ್ಲಿ ಆಶ್ರಯ ಬೇಡಿ, ಕಾಲಕರ್ಮವಶಾತ್ ಕುಂಬಾರ ಮಾಳಿಗೆ ಗರ್ಭಾದಾನ ಮಾಡಿ ಊರಿಗೆ ಹೊರಟುಹೋದ. ಈ ಮಾಳಿಯಲ್ಲಿಯೇ ಸರ್ವಜ್ಞ ಉದಿಸಿದ. ಆತನ ಹೇಳಿರುವ ಈ ಕೆಳಗಿನ ವಚನಗಳು ಈ ವೃತ್ತಾಂತಕ್ಕೆ ಪುಷ್ಠಿ ಒದಗಿಸುತ್ತವೆ.

**ಮಕ್ಕಳಿಲ್ಲವು ಎಂದು । ಅಕ್ಕಮಲ್ಲಮ್ಮನು ।**
**ದುಕ್ಕವ ಬಸವರಸಗರುಪಲು ಕಾಶಿಯ ।**
**ಮುಕ್ಕಣನೊಲಿದ ಸರ್ವಜ್ಞ**
**ಮಾಸೂರ ಬಸವರಸ । ಕೂಸನೀಶನ ಕೇಳೆ**
**ಕಾಶಿಯ ಅಭವನೊಳು ಪಡೆದ ವರವದುವೆ ।**
**ಸೂಸಿತೆಂತೆನಲು । ಸರ್ವಜ್ಞ**
**ಅಂಬಲೂರೊಳಗೆಸೆವ । ಕುಂಬಾರ ಸಾಲೆಯಲಿ ।**
**ಇಂಬಿನ ಕಳೆಯ ಮಾಳಿಯೊಳು ಬಸವರಸ ।**
**ನಿಂಬಿಟ್ಟನೆನ್ನ ಸರ್ವಜ್ಞ**
**ಬಿಂದುವನು ಬಿಟ್ಟು ಹೋ । ದಂದು ಬಸಿರಾದವಳು ।**
**ಒಂದಾಗಿ ಹೊತ್ತ ದಶಮಾಸ ಉದರದೊಳು ।**
**ನಿಂದಾನು ಬೆಳೆದೆ ಸರ್ವಜ್ಞ**

ಆದರೆ ಬೆಳೆಯುತ್ತಾ ಸರ್ವಜ್ಞನನ್ನು ಸರಿಯಾಗಿ ಮಾಳಿ ಪಾಲನೆ ಮಾಡಿಲ್ಲವೆಂದು ಕಾಣುತ್ತದೆ.

**ಹೆತ್ತವಳು ಮಾಳಿಯೆ । ನೊತ್ತಿ ತೆಗೆದವಳು ಬೆ ।**
**ನ್ನೊತ್ತಿ ಹಿಡಿದವಳು ಕಾಳಿ ತಾ ಮೊರದೊಳಗೆ ।**
**ಬಿತ್ತರಿಸಿದವಳು ಸರ್ವಜ್ಞ**
**ನೂಕಿದರು ಅವರಾಗ । ಕೂಕತನದೊಳು ಬೇಗ ।**
**ಲೋಕದೊಳಗೆಲ್ಲ ಕಂಡುದನು ನುಡಿದು ತಾ ।**
**ನೇಕವಾಗಿಹನು ಸರ್ವಜ್ಞ**

ಹೀಗೆ ಮನೆಯಿಂದ ಹೊರಬಿದ್ದ ಸರ್ವಜ್ಞ ಯಾವೊಂದು ಸ್ಥಳದಲ್ಲಿಯೂ ನೆಲೆಯೂರಿ ನಿಲ್ಲದೆ ಹಿಂಡನಗಲಿದ ಗಜದಂತೆ ದೇಶಾಂತರ ಹೊರಟು ಬಹುಶಃ ಆತ ಅನಾಥವಾಗಿ ಭಿಕ್ಷೆ ಬೇಡುತ್ತ ಕೇಳಿಕೆಯಿಂದ ಲೋಕವಿದ್ಯೆಯನ್ನು ಸಂಪಾದಿಸಿ ಅನುಭವದ ಸಾರವಾಗಿ ಇಡೀ ಕರ್ನಾಟಕವನ್ನೆಲ್ಲ ಸಂಚಾರಿಸಿದ್ದಾನೆ.

ತನ್ನ ಪಯಣದುದ್ದಕ್ಕೂ ಸರ್ವಜ್ಞ ಹಲವು ವಿದ್ವಾಂಸರನ್ನು, ಯೋಗಿಗಳನ್ನು ಭೇಟಿಯಾಗಿ ಗರ್ವದಿಂದಿರದೆ ಸರ್ವರೊಳು ಒಂದೊಂದು ನುಡಿಗಲಿತು ವಿದ್ಯೆಯ ಪರ್ವತವೆ ಆಗಿ,

ಸರ್ವಜ್ಞನೆನಿಸಿಕೊಂಡನು. ಬಾಳಿನಲ್ಲಿ ಕಹಿಯನ್ನು ಉಂಡರೂ ಸರ್ವಜ್ಞ ಬದುಕನ್ನು ಎಂದೂ ತಿರಸ್ಕರಿಸಲಿಲ್ಲ. ಸಮಾಜದಲ್ಲಿ ನಿಂದನೆಗೆ ಗುರಿಯಾದರೂ, ರಾಗದ್ವೇಷರಹಿತನಾಗಿ ಬಹುಮುಖ್ಯ ವ್ಯಕ್ತಿತ್ವವನ್ನು ಬೆಳೆಸಿಕೊಂಡನು. ಸಮಾಜದೊಳಗಿನ ವ್ಯಕ್ತಿಗಳು, ಲೋಪದೋಷಗಳನ್ನು ಆತ ಕಟುವಾಗಿ ಖಂಡಿಸಿದ್ದಾನೆ. ಪೂರ್ವದಿಂದ ನಡೆದು ಬಂದ ಅನೇಕ ರೂಢಿ ಸಂಪ್ರದಾಯಗಳನ್ನು ಅವನು ಪ್ರಶ್ನಿಸಿದ್ದಾನೆ. ಸಮಾಜದ ಅವ್ಯವಸ್ಥೆಯನ್ನು ವಿಶಾಲದೃಷ್ಟಿಯಿಂದ ಹಾಗೂ ನಿಷ್ಪಕ್ಷಪಾತ ರೀತಿಯಿಂದ ತಿದ್ದುವ ಸ್ವಭಾವ ಅವನದ್ದು. ಸರ್ವಜ್ಞನ ವ್ಯಕ್ತಿತ್ವದ ಕುರಿತು ರಂ.ಶ್ರೀ. ಮುಗಳಿ ಅವರು ಹೇಳುವಂತೆ "ಅನುಭವಶಾಲಿ, ಸತ್ಯಪ್ರೇಮಿ, ಖಂಡಿತವಾದಿ, ವಿಶಾಲಮನಸ್ಸ, ವಿರಕ್ತ, ವಿವೇಕಿ ಎಂಬ ಮೂರ್ತಿ ಚಿತ್ರವು ನಮ್ಮ ಕಣ್ಣು ಮುಂದೆ ಅವನ ತ್ರಿಪದಿಗಳನ್ನು ಓದುತ್ತ ಹೋದಹಾಗೆ ಸುಳಿಯುತ್ತದೆ".

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಹಾಕಾವ್ಯ ಬರೆಯದೆ ಮಹಾಜನಪ್ರಿಯ ಎನಿಸಿಕೊಂಡ ಕವಿ ಸರ್ವಜ್ಞನೊಬ್ಬನೆ ಎಂದೆನಿಸುತ್ತದೆ. ಹಾಗಾಗಿಯೇ ಅಕ್ಷರಸ್ಥ ಅನಕ್ಷರಸ್ಥರೆನ್ನದೆ ಎಲ್ಲರ ಮನಸ್ಸಿನಲ್ಲಿಯೂ ಆತ ಆಳವಾಗಿ ಕುಳಿತುಬಿಟ್ಟಿದ್ದಾನೆ. ಆತ ಜನಪದ ತ್ರಿಪದಿಗೆ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವನ್ನು ಗಳಿಸಿಕೊಟ್ಟಾತ. ಸಾವಿರಾರು ತ್ರಿಪದಿಗಳ ಮೂಲಕ ಸತ್ಯವಿಚಾರಗಳನ್ನು ಸಾರಿದ ಸರ್ವಜ್ಞ ತ್ರಿಪದಿ ಚಕ್ರವರ್ತಿ. ಸಾಗರದಷ್ಟು ವಿಸ್ತಾರವಾದ ಸರ್ವಜ್ಞನ ವಚನಗಳಲ್ಲಿ ಕೆಲವನ್ನು ಇಲ್ಲಿ ಗಮನಿಸಬಹುದು.

ಸರ್ವಜ್ಞನದು ಅನೇಕ ವಿಷಯಗಳಲ್ಲಿ ಕ್ರಾಂತಿಕಾರನ ದೃಷ್ಟಿ. ಆತ ಹಿಂದಿನಿಂದಲೂ ನಡೆದು ಬಂದ ಅನೇಕ ರೂಢಿ ಸಂಪ್ರದಾಯಗಳನ್ನು ಪ್ರಶ್ನಿಸುತ್ತಾನೆ. ಆತ ವಚನಕಾರರ ಹಾಗೆ ಸಮತೆಯ ತತ್ವವನ್ನು ಎತ್ತಿ ಹಿಡಿದವನು.

* **ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।**
**ಸುಡುವಗ್ನಿಯೊಂದೆ ಇರುತಿರಲು, ಕುಲಗೋತ್ರ ।**
**ನಡುವೆ ಎತ್ತಣದು । ಸರ್ವಜ್ಞ॥**

* **ಅವಯವಗಳೆಲ್ಲರಿಗೆ । ಸವನಾಗಿ ಇರುತಿರಲು ।**
**ಭವಿ ಭಕ್ತ, ಶ್ವಪಚ ಶೂದ್ರರಿವರೆಂತೆಂಬ ।**
**ಕವನವೆತ್ತಣದು ಸರ್ವಜ್ಞ॥**

ಮತ–ಧರ್ಮಗಳ ಹೆಸರಿನಲ್ಲಿ, ಮನುಷ್ಯ–ಮನುಷ್ಯರ ನಡುವೆ ಕುಲಭೇದದ ಗೋಡೆಗಳನ್ನು ಕಟ್ಟುವುದನ್ನು ಸರ್ವಜ್ಞ ವಿರೋಧಿಸುತ್ತಾನೆ. ಜಾತಿ ಎಂಬುದು ಮನುಷ್ಯ ಮನುಷ್ಯರನ್ನೇ ಬೇರ್ಪಡಿಸಿರುವ; ಜಾತಿಯ ಕಾರಣಕ್ಕಾಗಿ ನೂರಾರು ಜಗಳ ಕೊಲೆಗಳಾಗುತ್ತಿರುವ; ಭಕ್ತಿ, ಧಾರ್ಮಿಕತೆ ಎಂಬುದು ತೋರಿಕೆಯ ಒಂದೊಂದು ಸಮುದಾಯದ ಭಾಗವಾಗುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಸರ್ವಜ್ಞನ ವಚನಗಳು ಈ ಅನಿಷ್ಟಗಳಿಗೆಲ್ಲ ಔಷಧಿಗಳೆಂದರೆ ತಪ್ಪಾಗದು.

ಸರ್ವಜ್ಞನಿಗೆ ಶಿಕ್ಷಣದ ಮಹತ್ತ್ವದ ವ್ಯಾಪಕ ಅರಿವಿತ್ತು. ಜೀವನದಲ್ಲಿ ಉತ್ತಮ ಸಂಸ್ಕಾರ, ನಡತೆ ರೂಪುಗೊಳ್ಳುವುದು ಉತ್ತಮ ಶಿಕ್ಷಣದಿಂದ. ಸಜ್ಜನರ ಸಹವಾಸ, ಯೋಗ್ಯ ಗುರುವಿನಲ್ಲಿ ಶಿಕ್ಷಣಾಭ್ಯಾಸ ಇವುಗಳಿಂದ ಮನಸ್ಸು ವಿಕಾಸ ಹೊಂದಿ ಉತ್ತಮ ಸಂಸ್ಕಾರಗಳಿಂದೊಡಗೂಡುವುದು. ಹಾಗಾಗಿ ವಿದ್ಯೆ ಬಹಳ ಮುಖ್ಯವಾದುದು ಎಂಬುದನ್ನು ತನ್ನ ಅನೇಕ ವಚನಗಳಲ್ಲಿ ಹೇಳುತ್ತಾನೆ.

**ವಿದ್ಯೆ ಕಲಿಸದ ತಂದೆ ಬುದ್ಧಿ ಹೇಳದ ಗುರುವು ।**

**ಬಿದ್ದಿರಲು ಬಂದು ನೋಡದ ತಾಯಿಯು ।**

**ಶುದ್ಧ ವೈರಿಗಳು ಸರ್ವಜ್ಞ॥**

ಗುರುವಿನ ಯೋಗ್ಯತೆಯನ್ನು ಕುರಿತು ಮಾತನಾಡುವ ಸರ್ವಜ್ಞ ಗುರುವಿನ ಯೋಗ್ಯತೆಯು ಉಚ್ಚಮಟ್ಟದ್ದಾಗಿರಬೇಕೆಂದು ಎನ್ನುತ್ತಾ ಗುರುವಿನ ಮಹತ್ವವನ್ನು ಸಾರುತ್ತಾನೆ.

**ತಂದೆಗೂ ಗುರುವಿಗೂ ಒಂದು ಅಂತರವುಂಟು ।**

**ತಂದೆ ತೋರುವನು ಸದ್ಗುರುವ ಗುರುರಾಯ ।**

**ಬಂಧನವ ಕಳೆವ ಸರ್ವಜ್ಞ॥**

ಗುರುವಾದವನು ತನ್ನ ಶಿಷ್ಯನ ಉನ್ನತಿಯನ್ನು ಬಯಸಬೇಕು. ಯಾವ ಆಸೆ ಪ್ರಲೋಭನಗಳಿಗೆ ಒಳಗಾಗದೆ ವಿದ್ಯೆಯನ್ನು ಕಲಿಸಬೇಕು. ಯಾವುದೇ ಪಲಾಪೇಕ್ಷೆಗಳಿಲ್ಲದೆ ವಿದ್ಯೆ ಧಾರೆಯೆರೆಯಬೇಕು. ತಂದೆಯಾದವನು ಕೈ ಹಿಡಿದು ಉತ್ತಮ ಗುರುವನ್ನು ತೋರುತ್ತಾನೆ. ಆ ಎಡೆಗೆ ಕರೆದೊಯ್ಯುತ್ತಾನೆ. ಗುರುವಾದವನು ತಾನು ಹೇಳಿಕೊಡುವ ವಿದ್ಯೆಯ ಬೆಳಕಿನಿಂದ ಮಗುವಿನ ಅಜ್ಞಾನದ ಕತ್ತಲನ್ನು ನೀಗುತ್ತಾನೆ. ಸರ್ವಜ್ಞ ಆಧ್ಯಾತ್ಮ ಮಾರ್ಗದಲ್ಲಿ ಗುರುವಿನ ಅವಶ್ಯಕತೆ ಮತ್ತು ಮಹತ್ವವನ್ನು ಅರಿತಿದ್ದನು. ಅದು ಆತನ ಅನೇಕ ವಚನಗಳಲ್ಲೂ ಕಾಣಬಹುದು.

ಸರ್ವಜ್ಞನಿಗಿದ್ದ ಜೀವನಾನುಭವ ವಿಸ್ತಾರವಾದುದು. ರಾಜರು, ಶ್ರೀಮಂತರು, ಸಾಲಗಾರರು, ಆಷಾಢಭೂತಿಗಳು, ವಿಧವೆಯರು, ವೇಶ್ಯೆಯರು, ಹೆಂಗಸರು, ಮಠಗಳು–ಇವೆಲ್ಲವನ್ನು ಆತ ಹತ್ತಿರದಿಂದ ನೋಡಿದ್ದಾನೆ. ಜನರ ಆಚಾರವಿಚಾರ, ಆಹಾರ, ವಿಹಾರಗಳು, ಮಾನವಸ್ವಭಾವ, ಮೊದಲಾದವನ್ನೆಲ್ಲ ಸರ್ವಜ್ಞ ಸೂಕ್ಷ್ಮವಾಗಿ ಗ್ರಹಿಸಿದ್ದಾನೆ.

ಜಾತಿಪದ್ಧತಿ ಮತ್ತು ಅಸ್ಪೃಶ್ಯತೆಗಳ ವಿರುದ್ಧ ಎಲ್ಲ ಕಾಲದ ಸಮಾಜದ ಸುಧಾರಕರೂ ದನಿಯನ್ನೆತ್ತಿದ್ದಾರೆ. ಚಳವಳಿಗಳನ್ನು ನಡೆಸಿದ್ದಾರೆ. ಸರ್ವಜ್ಞನು ಸಹ ಜಾತಿ, ಕುಲ, ಹೊಲೆತನ ಮೊದಲಾದ ವಿಚಾರಗಳನ್ನು ಕುರಿತು ತನ್ನ ಪ್ರಗತಿಪರವಾದ ಚಿಂತನೆಗಳನ್ನು ಮಂಡಿಸಿದ್ದಾನೆ. ಆ ಮೂಲಕ ಸಾಮಾಜಿಕ ಅಸಮಾನತೆಯ ನಿವಾರಣೆಗೆ ಪ್ರಯತ್ನಿಸಿದ್ದಾನೆ. ಅಂತಹ ಕೆಲ ತ್ರಿಪದಿಗಳನ್ನು ಇಲ್ಲಿ ಕಾಣಬಹುದು.

* **ಜಾತಿಹೀನರ ಮನೆಯ । ಜ್ಯೋತಿ ತಾ ಹೀನವೇ ?**

**ಜಾತಿ ವಿಜಾತಿಯೆನಬೇಡ, ದೇವನೊಲಿ–।**

**ದಾತನೇ ಜಾತ । ಸರ್ವಜ್ಞ॥**

- **ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು ।**
  **ಸುಡುವಗ್ನಿಯೊಂದೆ ಇರುತಿರಲು ಕುಲಗೋತ್ರ ।**
  **ನಡುವೆ ಎತ್ತಣದು ? ಸರ್ವಜ್ಞ**
- **ಸತ್ತುದನು ತಿಂಬಾತ । ಎತ್ತಣದ ಹೊಲೆಯನು?।**
  **ಒತ್ತೊತ್ತಿ ಜೀವಿಯ ಕೊರಳರಿದು ತಿಂಬಾತ ।**
  **ಉತ್ತಮದ ಹೊಲೆಯ ಸರ್ವಜ್ಞ**
- **ಸತ್ತ ಕತೆಯ ಹೊತ್ತ । ರೆತ್ತಣದ ಹೊಲೆಯನು?।**
  **ಉತ್ತಮನೆಂದು ಹೆರರೊಡವೆ ಹೊತ್ತರವ ।**
  **ನಿತ್ಯವೂ ಹೊಲೆಯ ಸರ್ವಜ್ಞ**
- **ಅವಯವಗಳೆಲ್ಲರಿಗೆ । ಸವನಾಗಿ ಇರುತಿರಲು ।**
  **ಭವಿ, ಭಕ್ತ, ಶ್ವಪಚ ಶೂದ್ರರಿವರಿಂತೆಂಬ**
  **ಕವನವೆತ್ತಣದು? ಸರ್ವಜ್ಞ**
- **ಯಾತರದು ಹೂವೇನು । ನಾತರದು ಸಾಲದೇ ?।**
  **ಜಾತಿ ವಿಜಾತಿಯೆನಬೇಡ, ದೇವನೊಲಿ ।**
  **ದಾತನೇ ಜಾತ । ಸರ್ವಜ್ಞ**
- **ಹಸಿವು ತೃಷೆ ನಿದ್ರೆಗಳು । ವಿಷಯ ಮೈಥುನ ಬಯಕೆ ।**
  **ಪಶು, ಪಕ್ಷಿ, ನರಗೆ ಸವನಿರಲು, ಕುಲವೆಂಬ ।**
  **ಘಸಣೆಯೆತ್ತಣದು? ಸರ್ವಜ್ಞ**

ಈ ಬಗೆಯ ಹಲವು ವಚನಗಳಲ್ಲಿ ಸರ್ವಜ್ಞ ಜಾತಿ, ಕುಲ, ಹೊಲೆತನ ಇತ್ಯಾದಿ ವಿಷಯಗಳನ್ನು ಕುರಿತು ಆಡಿರುವ ಮಾತುಗಳು ವಿಚಾರಪೂರ್ವಕವಾಗಿವೆ. ಜಾತಿ ಆಧಾರಿತ ಅಸಮಾನತೆಯನ್ನು ತೊಡೆದುಹಾಕುವ ಆಶಯ ಇಲ್ಲೆಲ್ಲ ವ್ಯಕ್ತವಾಗಿದೆ. ಸರ್ವಜ್ಞ ಹುಟ್ಟಿನಿಂದಲೇ ಮಾನವರಲ್ಲಿ ಮೇಲು–ಕೀಳುಗಳು ಬರುವುದಿಲ್ಲವೆಂಬುದನ್ನು ಪ್ರತಿಪಾದಿಸಿದ್ದಾನೆ. ನಿಜವಾದ ಕುಲಜರು ಯಾರು? ದಲಿತರು ಯಾರು? ಎಂಬುದನ್ನು ವ್ಯಾವಹಾರಿಕ, ವಾಸ್ತವಿಕ ಹಾಗೂ ವೈಚಾರಿಕ ಮಟ್ಟದಲ್ಲಿ ನಿಂತು ನಿರ್ಧರಿಸುತ್ತಾನೆ.

ಡಾಂಭಿಕ ಬಾಹ್ಯಾಚಾರವನ್ನು ಕಟುವಾಗಿ ವಿರೋಧಿಸಿದಾತ ಸರ್ವಜ್ಞ, ಆತ ಮೂರ್ತಿಪೂಜೆಗೆ, ವ್ಯಕ್ತಿಪೂಜೆಗೆ ಬದಲಾಗಿ ತತ್ತ್ವಪೂಜೆಗೆ, ಢಾಂಬಿಕ ಬಾಹ್ಯಾಚಾರಕ್ಕೆ ಬದಲಾಗಿ ಪ್ರಾಮಾಣಿಕ ಆತ್ಮಾನುಸಂಧಾನಕ್ಕೆ ಮಹತ್ವಕೊಟ್ಟಾತ.

**ಚಿತ್ತವಿಲ್ಲದೆ ಗುಡಿಯ ಸುತ್ತಿದರೆ ಫಲವೇನು?**
**ಎತ್ತು ಗಾಣವನು ಹೊತ್ತು ತಾ ನಿತ್ಯದಿ**
**ಸುತ್ತಿ ಬಂದಂತೆ ಸರ್ವಜ್ಞ**

ತೋರಿಕೆಯ ಭಕ್ತಿ ಹಾಗೂ ಆಚಾರ ನಿಷ್ಪ್ರಯೋಜಕ ಎನ್ನುವ ಸರ್ವಜ್ಞ ಮೋಕ್ಷ ಸಾಧನೆಗೆ ಚಿತ್ತೈಕಾಗ್ರತೆ ಮತ್ತು ಚಿತ್ತಶುದ್ಧಿ ಪ್ರಮುಖವಾಗಿರುವಾಗ ಅವುಗಳಿಲ್ಲದೆಯೇ ಮಾಡುವ ಯಾಂತ್ರಿಕ ಆಚರಣೆ ಗಾಣವನ್ನು ಹೊತ್ತ ಎತ್ತಿನ ತಿರುಗಾಟದಂತೆ ಎನ್ನುತ್ತಾನೆ. ಅಂತರ್ಮುಖಿಯಾಗಿ ಮನದೊಳಗೆ ಪೂಜೆ ಮಾಡುವವನು ಮನೆಯಲ್ಲಿಯೇ ಇದ್ದು ಮಠವಾಸಿಗಳಿಗಿಂತ ಹೆಚ್ಚಿನದಾದ ಫಲವನ್ನು ಪಡೆಯಬಹುದು. ಹಾಗಿಲ್ಲವಾದರೆ ಯಾವಾಗಲೂ ದೇವಾಲಯದಲ್ಲಿದ್ದರೇನು ಪ್ರಯೋಜನ.

**ಮನದಲ್ಲಿ ನೆನೆವಂಗೆ ಮನೆಯೇನು ಮಠವೇನು**
**ಮನದಲ್ಲಿ ನೆನೆಯದಿರುವನು ದೇಗುಲದ**
**ಕೊನೆಯಲ್ಲಿದ್ದೇನು ಸರ್ವಜ್ಞ**

ಬಸವಣ್ಣ ‘ಉಂಬ ಜಂಗಮ ಬಂದರೆ ನಡೆ ಎಂಬರು; ಉಣ್ಣದ ಲಿಂಗಕ್ಕೆ ಬೋನವ ಹಿಡಿ ಎಂಬರಯ್ಯ’ ಎಂದು ಹೇಳಿದಂತೆ ಸರ್ವಜ್ಞನೂ ಹೇಳುತ್ತಾನೆ.

**ಉಣಬಂದ ಜಂಗಮಕೆ ಉಣಬಡಿಸಲೊಲ್ಲದೇ**
**ಉಣದಿಪ್ಪ ಲಿಂಗಕುಣಬಡಿಸಿ ಕೈಮುಗಿವ**
**ಬಣಗುಗಳ ನೋಡ ಸರ್ವಜ್ಞ**

ಬಸವಣ್ಣನವರಿಗೆ ‘ಕಾಯಕವೇ ಕೈಲಾಸ’ವಾಗಿ ಕಂಡಂತೆ, ಸರ್ವಜ್ಞನಿಗೆ ದುಡಿಮೆಯು ವ್ಯಕ್ತಿಯ ಹಾಗೂ ಸಮಾಜದ ಏಳಿಗೆಗೆ ಅವಶ್ಯಕವಾಗಿ ಕಂಡುಬಂದಿತು. ಸರಾಗ, ಸುಖಕರವಾದ ಬದುಕಿಗೆ ದುಡಿಮೆ ಅತ್ಯಗತ್ಯ. ವ್ಯಕ್ತಿಯ ಬದುಕಿಗೆ ದುಡಿಮೆಯೆ ಭೂಷಣ.

* **ಕಾಯಕವು ಉಳ್ಳನಕ । ನಾಯಕನು ಎನಿಸಿಪ್ಪ ।**
**ಕಾಯಕವು ತೀರ್ಪ ಮರುದಿನವೆ. ಸುಡುಗಾಡ ।**
**ನಾಯಕನು ಎನಿಪ । ಸರ್ವಜ್ಞ**

* **ಉದ್ಯೋಗವುಳ್ಳವನ । ಹೊದ್ದುವುದು ಸಿರಿ ಬಂದು ।**
**ಉದ್ಯೋಗವಿಲ್ಲದಿರುವವನ ಕರದೊಳಗೆ ।**
**ಇದ್ದುದೂ ಪೋಕು ಸರ್ವಜ್ಞ॥**

ಮನುಷ್ಯನಾದವನು ಯಾವುದಾದರೊಂದು ದುಡಿಮೆಗೆ ಅಂಟಿಕೊಂಡಿರಬೇಕು. ಹಾಗಿದ್ದಾಗ ಮಾತ್ರ ಬದುಕಿನಲ್ಲಿ ಸುಖ ಕಾಣಲು ಸಾಧ್ಯ. ಆಲಸ್ಯ ಅತ್ಯಂತ ಅಪಾಯಕಾರಿ. ಕಾಯಕದ ಅನುಸರಣೆಯಿಂದಾಗುವ ಪ್ರಯೋಜನದ ಜೊತೆಗೆ ಅದನ್ನು ಅನುಸರಿಸದೆ ಇರುವುದರಿಂದಾಗುವ ಅನರ್ಥವನ್ನು ಸರ್ವಜ್ಞ ಹೇಳುತ್ತಾನೆ. ಹಾಗಾಗಿ ಕಾಯಕವೇ ಕೈಲಾಸ ಎಂದು ನಂಬಿದವನ ಮನೆಯಲ್ಲಿ ಸುಖನೆಮ್ಮದಿ ತಾನಾಗಿಯೆ ನೆಲೆಸುವುದು. ಆಗ,

**ಬೆಚ್ಚನಾ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ**

**ಇಚ್ಛೆಯನರಿವ ಸತಿಯಾಗಿ ಸ್ವರ್ಗಕೆ**

**ಕಿಚ್ಚು ಹಚ್ಚೆಂದ ಸರ್ವಜ್ಞ**

ಇಂದ್ರಿಯಗಳ ಸ್ವಾಧೀನತೆಯನ್ನು ಕುರಿತು ಹೇಳುವ ಸರ್ವಜ್ಞ ಪಂಚಕರ್ಮೇಂದ್ರಿಯ–ಜ್ಞಾನೇಂದ್ರಿಯಗಳನ್ನು ಮನುಷ್ಯ ತನ್ನ ಹಿಡಿತದಲ್ಲಿಟ್ಟುಕೊಂಡು ಬದುಕಬೇಕು. ಇಲ್ಲವಾದಲ್ಲಿ ಅವು ಮನುಷ್ಯನ ಆರೋಗ್ಯ ಹಾಗೂ ಆರ್ಥಿಕ ಜೀವನದ ನಾಶಕ್ಕೆ ಕಾರಣವಾಗುತ್ತದೆ ಎಂದೆನ್ನುತ್ತಾನೆ. ಆದ್ದರಿಂದ

**ಇಂದ್ರಿಯದ ಆಸೆಗಳ ಬಂಧಿಸದೆ ಕೊಂದವನು**

**ಸುಂದರನು ಅಕ್ಕು ಸುಖಿಯಕ್ಕು ಲೋಕಕ್ಕೆ**

**ಚಂದಿರನು ಅಕ್ಕು ಸರ್ವಜ್ಞ**

ಮಾನವ ಮೋಜಿಗಾಗಿಯೋ, ತನ್ನೊಳಗಿನ ನೋವಿನ ಪರಿಹಾರಕ್ಕೊ, ಸಹವಾಸದಿಂದಲೋ ಒಂದಿಲ್ಲೊಂದು ವ್ಯಸನಕ್ಕೀಡಾಗುತ್ತಾನೆ. ಆದರೆ ಅದರಿಂದಾಗುವ ಪರಿಣಾಮ ಮಾತ್ರ ಘೋರವಾದುದು. ಅಂತಹ ಅನೇಕ ಚಿತ್ರಣಗಳನ್ನು ಸರ್ವಜ್ಞ ಕಂಡಿರಿಸಿದ್ದಾನೆ.

**ಭಂಗಿಯನು ಸೇದುವನ । ಭಂಗವನು ಏನೆಂಬೆ ।**

**ಭಂಗಿಯ ಗುಂಗು ತಲೆಗೇರಲಾಡುತಿಹ**

**ಮಂಗನಂತಿಹನು ಸರ್ವಜ್ಞ**

**ಸಿಂದಿಯನು ಸೇವಿಪನು । ಹಂದಿಯಂತಿರುತಿಹನು**

**ಹಂದಿಯೊಂದೆಡೆಗೆ ಉಪಕಾರಿ, ಕುಡಿಕನು ।**

**ಹಂದಿಗೂ ಕಷ್ಟ ಸರ್ವಜ್ಞ**

ಭಂಗಿ ಸೇದುವವನನ್ನು ಮಂಗನಿಗೆ ಹೋಲಿಸಿರುವುದು ಅಂತಹ ವ್ಯಕ್ತಿಯ ಬೇಜಾವಬ್ದಾರಿತನವನ್ನು ತೋರಿಸಿದರೆ, ಹಂದಿಯ ನಿದರ್ಶನ ಕುಡಿಯುವವನ ಹೊಲಸುತನವನ್ನು ತೋರಿಸುತ್ತಿದೆ.

**ವ್ಯಸನದಲಿ ದೇಹವು । ಮಸಣವನು ಕಾಣುವದು ।**

**ವ್ಯಸನವನು ಬಿಟ್ಟು ಹಸನಾಗಿ ದುಡಿದರೆ**

**ಆಶನ ವಸನಗಳು ಸರ್ವಜ್ಞ**

ಇಂತಹ ವ್ಯಸನಗಳು ಮನುಷ್ಯನನ್ನು ಕೊಲ್ಲುವಂತವು. ಅವುಗಳನ್ನು ಬಿಟ್ಟು ದುಡಿಯುವತ್ತ ಗಮನಹರಿಸಿದರೆ ಬದುಕೆ ಸುಂದರ ಎನ್ನುತ್ತಾ ದುಡಿಮೆಯ ಮಹತ್ವವನ್ನು ಸಾರುತ್ತಾರೆ.

ಸರ್ವಜ್ಞನದು ಸರ್ವಸಮಾನತೆಯ ದೃಷ್ಟಿ. ಸಮಾಜದಲ್ಲಿ ಆರೋಗ್ಯಕರ ವಾತಾವರಣದ ನಿರ್ಮಾಣಕ್ಕಾಗಿ, ಅಂದಿನ ಜನರ ಅಸ್ತವ್ಯಸ್ತ ಬದುಕಿನ ಅವ್ಯವಸ್ಥೆಯನ್ನು ವಿಡಂಬನೆಯ ಮೂಲಕ ಪರಿಣಾಮಕಾರಿಯಾಗಿ ಹೇಳುವಲ್ಲಿ ಸರ್ವಜ್ಞ ಹಿಂದೆ ಮುಂದೆ ನೋಡಿದವನಲ್ಲ. ಆತನ ಅಂತರಾಳದಲ್ಲಿ ಸಮಾಜ ಚೊಕ್ಕಟವಾಗಿರಬೇಕೆಂಬ ಹಂಬಲವಿದೆ. ಯಾವುದೇ ವ್ಯಕ್ತಿ ತಾನು ಇನ್ನೊಂದರ ವಿರುದ್ಧ ದನಿ ಎತ್ತಬೇಕಾದರೆ ಮೊದಲು ತಾನು ಸರಿಯಾಗಿರಬೇಕಾಗುತ್ತದೆ. ಸರ್ವಜ್ಞ ಅಂಥ ಉನ್ನತ ಸೋಪಾನ

ಏರಿದ್ದನೆಂದು ಭಾವಿಸಬಹುದು. ಆದ್ದರಿಂದಲೇ ಯಾವ ಬಿಡೆಯೂ ಇಲ್ಲದೆ, ವೈಷಮ್ಯ ಕಂಡಲ್ಲಿ ಕಡ್ಡಿ ತುಂಡು ಮಾಡಿದ ಹಾಗೆ ಅಸಮಾನತೆ, ಅನ್ಯಾಯ, ಜಾತೀಯತೆಗಳ ಕುರಿತು ಕಟುವಾಗಿ ವಿಮರ್ಶಿಸಿದ್ದಾನೆ, ಜಾಲಾಡಿದ್ದಾನೆ.

ಸರ್ವಜ್ಞ ತನ್ನ ಕಾಲದಲ್ಲಿ ಸಾಮಾನ್ಯ ಮನುಷ್ಯನನ್ನು ಹತ್ತಿರದಿಂದ ನೋಡಲಾಗಿ ಆತನ ಕರ್ತವ್ಯವನ್ನು ಹೇಳುತ್ತಾನೆ.

**ಮೆಚ್ಚದಿರು ಪರಸತಿಯ ರಚ್ಚೆಯೊಳು ಬೆರೆಯದಿರು**
**ನಿಚ್ಚ ನೆರೆಯೊಳಗೆ ಕಾದಿರು ಒಬ್ಬರ**
**ಇಚ್ಛೆಯಲಿರದು ಸರ್ವಜ್ಞ**

ಸಾಲ ಮಾಡುವುದು ಸಾಮಾಜಿಕ ಕೆಡಕುಗಳಲ್ಲಿ ಒಂದೆಂದು ಸರ್ವಜ್ಞನ ಅಭಿಪ್ರಾಯ. ಕಷ್ಟಗಳು ಎದುರಾದಾಗ ಅದರ ನಿವಾರಣೆಗೆ ಸಾಲವನ್ನು ತರುವುದು ಮನುಷ್ಯನ ಗುಣ. ತೆಗೆದುಕೊಂಡ ಸಾಲವನ್ನು ಸರಿಯಾದ ಸಮಯಕ್ಕೆ ಹಿಂತಿರುಗಿಸುವುದು ಕರ್ತವ್ಯವೂ ಹೌದು. 'ಸಾಲ ಮಾಡಿಯಾದರೂ ತುಪ್ಪ ತಿನ್ನು' ಎನ್ನುವ ಸ್ವಭಾವ ಹಲವರದ್ದು. ತಮ್ಮ ವಿಲಾಸಕ್ಕಾಗಿ, ಸುಖಭೋಗಗಳಿಗಾಗಿ ಸಾಲ ಮಾಡುವವರನ್ನು ಸರ್ವಜ್ಞ ವಿಡಂಬನೆಗೆ ಗುರಿಪಡಿಸಿದ್ದಾನೆ.

**ಸಾಲವನು ತರುವಾಗ । ಹಾಲುಬೋನುಂಡಂತೆ ।**
**ಸಾಲಗನು ಬಂದು ಕೇಳಿದರೆ ಕುಂಡೆಗೆ ।**
**ಚೇಳು ಕಡಿದಂತೆ ಸರ್ವಜ್ಞ**
**ಸಾಲವನು ಕೊಂಬಾಗ । ಹಾಲು ಹಣ್ಣುಂಡಂತೆ**
**ಸಾಲಿಗನು ಬಂದು ಎಳೆವಾಗ ಕಿಬ್ಬದಿಯ**
**ಕೀಲು ಮುರಿದಂತೆ ಸರ್ವಜ್ಞ**

ಸಾಲ ತೆಗೆದುಕೊಳ್ಳುವಾಗಿನ ಉತ್ಸಾಹ, ಸಂಭ್ರಮವನ್ನು 'ಹಾಲು ಬೋನುಂಡಂತೆ' 'ಹಾಲು ಹಣ್ಣುಂಡಂತೆ' ಎಂಬ ಎರಡು ಸಾದೃಶ್ಯಗಳ ಮೂಲಕವೂ; ಸಾಲಿಗನು ಪಡೆದ ಸಾಲವನ್ನು ಹಿಂತಿರುಗಿಸುವಂತೆ ಒತ್ತಾಯಿಸಿದಾಗಿನ ಕಹಿ ಅನುಭವವನ್ನು 'ಕುಂಡೆಗೆ ಚೇಳು ಕಡಿದಂತೆ' 'ಕಿಬ್ಬದಿಯ ಕೀಲು ಮುರಿದಂತೆ' ಎನ್ನುವ ಅರ್ಥಪೂರ್ಣ ಹೋಲಿಕೆಗಳ ಮೂಲಕ ಸರ್ವಜ್ಞ ವಿಡಂಬಿಸಿದ್ದಾನೆ.

* **ನಂಬುಗೆಯು ಇರುವತನಕ । ಕೊಂಬುವುದು ಸಾಲವನು ।**
  **ನಂಬುಗೆಯು ಕೆಟ್ಟ ಬಳಿಕ ತಾ ಬೇಗೆಯಲಿ ।**
  **ಬೆಂದು ಸತ್ತಂತೆ ಸರ್ವಜ್ಞ**
* **ನೂರು ಹಣ ಸಿಗುವನಕ । ಮೀರಿ ವಿನಯದಲಿಪ್ಪ ।**
  **ನೂರರೊಳ್ಮೂರ ಕೇಳಿದರೆ ಸಾಲಿಗನು ।**
  **ತೂರುವನು ಮಣ್ಣ । ಸರ್ವಜ್ಞ**

ಸಾಲದ ಸಂದರ್ಭದಲ್ಲಿ ಸಾಲ ಕೊಡುವವನು ಹಾಗೂ ತೆಗೆದುಕೊಳ್ಳುವವನು ಇಬ್ಬರಲ್ಲೂ ನಂಬಿಕೆ ಹಾಗೂ ವಿಶ್ವಾಸವಿರಬೇಕು. ಸಾಲ ಕೊಟ್ಟವನಿಗೆ ತಾನು ಕೊಟ್ಟ ಸಾಲ ಹಿಂತಿರುಗುತ್ತದೆ ಎಂಬ ವಿಶ್ವಾಸ, ಸಾಲ ಪಡೆದವನಿಗೆ ತಾನು ಹಿಂತಿರುಗಿಸುತ್ತೇನೆ ಎನ್ನುವ ದೃಢವಾದ ನಂಬಿಕೆ ಇರಬೇಕು. ಇಲ್ಲಿ ನಂಬಿಕೆಯು ಬಹಳ ಮುಖ್ಯ. 'ನಂಬುಗೆಯು ಕೆಟ್ಟ ಬಳಿಕ ತಾ ಬೇಗೆಯಲಿ ಬೆಂದು ಸತ್ತಂದೆ' ಎಂದು ಸರ್ವಜ್ಞ ಮಾರ್ಮಿಕವಾಗಿ ಹೇಳುತ್ತಾನೆ. ಸಾಲ ಪಡೆಯುವಾಗ ಇದ್ದ ನಯವಿನಯ, ಸಾಲ ಪಡೆದ ಮೇಲೆ ಇಲ್ಲವಾದಾಗ ಸಾಲಕೊಟ್ಟವನು ನಿಷ್ಟುರವಾಗಿ ವರ್ತಿಸುವುದನ್ನು ಸರ್ವಜ್ಞ ಕಂಡಿರಬೇಕು. ಹಾಗಾಗಿ 'ನೂರು ಹಣ ಸಿಗುವತನಕ........... ಸಾಲಿಗನು ತೂರುವನು ಮಣ್ಣ' ಎಂದು ಹೇಳುತ್ತಾನೆ.

**ಹಾಲು ಬೋನವು ಲೇಸು । ಮಾಲೆ ಕೊರಳಿಗೆ ಲೇಸು ।**
**ಸಾಲವಿಲ್ಲದವ ಮನೆ ಲೇಸು, ಬಾಲರ ।**
**ಲೀಲೆ ಲೇಸೆಂದ ಸರ್ವಜ್ಞ**

ಸಾಲದ ಕುರಿತು ಅದರ ಕೆಡುಕುಗಳನ್ನು ಕುರಿತು ತನ್ನ ಅನೇಕ ತ್ರಿಪದಿಗಳಲ್ಲಿ ವಾಸ್ತವ ಚಿತ್ರಣವನ್ನು ನೀಡುವ ಸರ್ವಜ್ಞ ಸಾಲವಿಲ್ಲದವನ ಮನೆ ಚೆಂದ ಎಂಬುದನ್ನು ಅಂತಿಮವಾಗಿ ನಿರೂಪಿಸುತ್ತಾನೆ. ಸಾಲ ಪಡೆದವನು ಮತ್ತು ಸಾಲ ಕೊಟ್ಟವನು ಇವರಿಬ್ಬರ ಸ್ಥಿತಿಯನ್ನು ಪ್ರತ್ಯಕ್ಷವಾಗಿ ಕೂಡಿರುವ ಸರ್ವಜ್ಞ 'ಸಾಲ'ದ ಕೆಡುಕುಗಳನ್ನು ಪರಿಣಾಮಕಾರಿಯಾಗಿ ಕಟ್ಟಿಕೊಟ್ಟಿದ್ದಾನೆ.

ಸರ್ವಜ್ಞ ಯಾವುದಕ್ಕೂ ಅಂಜಿದವನಲ್ಲ. ಅವನ ನೋಟ ವಿಶಾಲವಾಗಿತ್ತು. ಯಾರೇ ಆಗಲಿ ತಾನು ಇನ್ನೊಂದರ ವಿರುದ್ಧ ದನಿಯೆತ್ತಬೇಕಾದರೆ ಮೊದಲು ತಾನು ಸರಿಯಾಗಿರಬೇಕಾಗುತ್ತದೆ. ಹಾಗಿದ್ದಾಗ ಮಾತ್ರ ಅವನ ಮಾತಿಗೆ ಬೆಲೆ. ಸರ್ವಜ್ಞ ಅಂಥ ಉನ್ನತ ಸೋಪಾನ ಏರಿದ್ದವನಾಗಿ ಕಂಡುಬರುತ್ತಾನೆ.

**ನಿತ್ಯನೇಮಗಳೇಕೆ ಮತ್ತೆ ಪೂಜೆಗಳೇಕೆ**
**ನೆತ್ತಿ ಬೋಳೇಕೆ ಜಡೆಯೇಕೆ ವದನದಿ**
**ಸತ್ಯವುಳ್ಳವಗೆ ಸರ್ವಜ್ಞ**

ಅನ್ಯಸ್ತ್ರೀಯರನ್ನು ತಾಯಿಯಂತೆ ಕಾಣುವ ಮನೋಭಾವ ಸರ್ವಜ್ಞನದು. ಸ್ತ್ರೀಯ ಒಳ್ಳೆಯತನ, ಕೆಟ್ಟತನ ಹಾಗೂ ದುಷ್ಟತನಗಳನ್ನು ಕಂಡಿದ್ದ ಸರ್ವಜ್ಞ 'ಸ್ತ್ರೀ ಸ್ತುತಿ ಪದ್ಧತಿ'ಯಲ್ಲಿ ಹೆಣ್ಣಿನ ಒಳ್ಳೆಯತನವನ್ನು; 'ಸ್ತ್ರೀನಿಂದಾಪದ್ಧತಿ'ಯಲ್ಲಿ ಅವಳ ಕೆಟ್ಟತನವನ್ನೂ; 'ಜಾರೆಯರ ಪದ್ಧತಿ'ಯಲ್ಲಿ ಆಕೆಯ ದುಷ್ಟತನವನ್ನೂ ಹೇಳಿದ್ದಾನೆ.

**ಹೆಣ್ಣಿನಿಂದಲೆ ಇಹವು । ಹೆಣ್ಣಿನಿಂದಲೆ ಪರವು ।**
**ಹೆಣ್ಣಿಂದ ಸಕಲ ಸಂಪದವು, ಹೆಣ್ಣೊಲ್ಲ ।**
**ದಣ್ಣಗಳು ಯಾರು? ಸರ್ವಜ್ಞ**

**ಮಗಳಕ್ಕ ತಂಗಿಯು । ಮಿಗೆ ಸೊಸೆಯು ನಾದುನಿಯು**

**ಜಗದ ವನಿತೆಯರು, ಜನನಿಯು, ಇವರೊಳಗೆ ।**

**ಜಗಕ್ಕೊಬ್ಬಳೈಸೆ ಸರ್ವಜ್ಞ**

ಹೆಣ್ಣಿನ ಕುರಿತು ಸರ್ವಜ್ಞನಿಗಿರುವ ಗೌರವ ಹೆಣ್ಣಿನಿಂದಲೇ ಇಹ–ಪರ–ಸಕಲಸಂಪದವು ಎನ್ನುವ ಮಾತಿನಿಂದ ವ್ಯಕ್ತವಾಗಿದೆ. ಸ್ತ್ರೀಯಾದವಳು ಮಗಳಾಗಿ, ಅಕ್ಕ, ತಂಗಿ, ಸೊಸೆ, ನಾದುನಿ, ತಾಯಿ–ಹೀಗೆ ಆಕೆಯ ಪಾತ್ರ ಈ ಜಗದೊಳಗೆ ಹಿರಿದಾದುದು.

ಹೀಗೆ ಹೇಳುತ್ತಲೇ ಹೆಣ್ಣಿನ ಸೆಳೆತಗಳಿಗೆ ಒಳಗಾಗದವರು ಇಲ್ಲವೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಹೆಣ್ಣಿನ ಪ್ರಭಾವವಾಗಿರುವುದನ್ನು ಹೇಳುತ್ತಾನೆ.

**ಹರಿಯ ಉರವನು ಮೆಟ್ಟಿ । ಹರನ ಶಿರವನು ಏರಿ ।**

**ಸರಸಿಜೋದ್ಭವನ ಮೊಗಗೆಡಿಸಿ ಮೀರಿದಳು ।**

**ಹಿರಿಯರಿನ್ನಾರು ? ಸರ್ವಜ್ಞ**

ಹೆಣ್ಣು ಲಕ್ಷ್ಮಿ, ಗಂಗೆ, ಸರಸ್ವತಿಯರ ರೂಪದಲ್ಲಿ ತ್ರಿಮೂರ್ತಿಗಳಾದ ಹರಿಹರ ಬ್ರಹ್ಮಾದಿಗಳನ್ನೂ ಗೆದ್ದಿದ್ದಾಳೆ. ವಿಜಯದ ಸಂಕೇತವಾಗಿ ಅವರ ಎದೆ–ತಲೆ–ಮುಖಗಳಲ್ಲಿ ಆಸೀನಳಾಗಿದ್ದಾಳೆ. ಹೀಗಿರುವಾಗ ಸಾಮಾನ್ಯ ಮನುಷ್ಯನ ಗತಿಯೇನು? ಹೆಣ್ಣಿನ ಮಾಯಕ್ಕೆ ಮರುಳಾಗದವರೇ ಇಲ್ಲ.

ಹೆಣ್ಣಿಂದಲೇ ಸುಖಿಸಂಸಾರ ಎನ್ನುವ ಸರ್ವಜ್ಞ 'ಹೆಂಡರಿಲ್ಲದವನ ಮನೆವಾರ್ತೆ ತಲೆಹೋದ ಮುಂಡದಂತೆ', 'ಹೆಣ್ಣಿಲ್ಲದವನ ಸಂಸಾರ ಮಳಲೊಳಗೆ ಎಣ್ಣೆ ಹೊಯಿದಂತೆ', 'ಸತಿಯರಿಗೆ ನಗೆಮೊಗವು ಲೇಸು', 'ಮನಬಂದ ಹೆಣ್ಣನ್ನು, ವಿನಯದಲಿ ಕರೆದಿತ್ತು', ಮನಮುಟ್ಟ ಬಾಳ್ವೆ ಮಾಡಿದರೆ ಅಮೃತದ ಕೆನೆಯ ಸವಿದಂತೆ', 'ಬೆಚ್ಚನ ಮನೆಯಾಗಿ ವೆಚ್ಚಕ್ಕೆ ಹೊನ್ನಾಗಿ ಇಚ್ಛೆಯನು ಅರಿವ ಸತಿಯಾಗಿ ಸ್ವರ್ಗಕ್ಕೆ ಕಿಚ್ಚು ಹಚ್ಚು', 'ಒಳ್ಳೆಯ ಗುಣದವಳು ಸೊಸೆಯಾದರೆ ಆ ಮನೆಗೆ ಬಿಂದಿಗೆಯ ಹೊನ್ನು', ಇಂತ ಅನೇಕ ಚಿತ್ರಣಗಳನ್ನು ನೀಡುತ್ತಾನೆ.

ಸುಖಿಸಂಸಾರದ ಚಿತ್ರಣ ಕೊಡುತ್ತಲೇ ಅದಕ್ಕೆ ವಿರುದ್ಧವಾಗಿ ಅಸುಖೀ ಸಂಸಾರದ ಚಿತ್ರವನ್ನೂ ನೀಡಿದ್ದಾನೆ. ಕೆಲವೊಂದನ್ನು ಇಲ್ಲಿ ನೋಡಬಹುದು. 'ಹರುಷವಿಲ್ಲದಳ ಮನೆವಾರ್ತೆ, ಅರನಾರಿ । ಪುರುಷನಂತಕ್ಕು,' 'ನಗೆಯಿಲ್ಲದವಳ ಒಡನಾಟ, ಬೆರಣಿಯ । ಹೊಗೆಯ ಕುಡಿದಂತೆ', 'ನೋವನರಿಯವಳ ಮನೆವಾರ್ತೆ, ಸಿಹಿಯೆರಸಿ । ಬೇವು ತಿಂದಂತೆ', 'ಒಡಕು ಬಾಯವಳ ಮನೆವಾರ್ತೆ, ಎಣ್ಣೆಯ । ಕುಡಿಕೆಯೊಡೆದಂತೆ', 'ಬೇಸರಾದವಳ ಮನೆವಾರ್ತೆ, ಹಣ ಹೋದ। ವೇಶಿಯಂತಕ್ಕು', ಹಸನವಿಲ್ಲದಳ ಮನೆವಾರ್ತೆ, ತಿಪ್ಪೆಯ । ಕಸದಂತೆ ಇಹುದು', 'ಷ ತಂದುದನು ಅರಿದು ಬಳಸದ ಅಂಗನೆಯು । ಕೊಂದಳೆಂದರಿಗು', – ನೆಚ್ಚಿಗಿಲ್ಲದಳ ಮನೆವಾರ್ತೆ, ಶ್ರಾವಣದ ಕಿಚ್ಚುಕಾದಂತೆ', ಹಲ್ಲಿಲ್ಲದವಳ ರತಿಕೂಟ,

ಸಮರದಲ್ಲಿ । ಬಿಲ್ಲು ಮುರಿದಂತೆ', 'ಹರೆಯು ಹೋದವಳ ಒಡೆನಾಟ, ನಾಯಿ ಹಳೆ । ಕೆರವ ಕಡಿದಂತೆ', – ಹೀಗೆ ಹೆಣ್ಣಿನ ಕೆಟ್ಟಗುಣವನ್ನು ಇಂತಹ ಅನೇಕ ಹೋಲಿಕೆಗಳ ಮೂಲಕ ವಿವರಿಸಿದ್ದಾನೆ.

'ಮಾತೇ ಮುತ್ತು ಮಾತೇ ಮೃತ್ಯು', 'ಮಾತು ಬೆಳ್ಳಿ, ಮೌನ ಬಂಗಾರ' 'ನುಡಿದರೆ ಮುತ್ತಿನ ಹಾರದಂತಿರಬೇಕು' – ಈ ಎಲ್ಲ ವಾಕ್ಯಗಳು ಮಾತಿನ ಮಹತ್ವವನ್ನು ಸಾರುತ್ತವೆ. ಮಾತನಾಡುವಾಗ ನಮ್ಮ ನಾಲಿಗೆಯ ಮೇಲೆ ಹಿಡಿತ ಇರಬೇಕು. ಏಕೆಂದರೆ ನಾವು ಎಚ್ಚರ ತಪ್ಪಿ ಆಡುವ ಮಾತು ಎದುರಿಗಿರುವವರಿಗೆ ಮನಸ್ಸಿಗೆ ನೋವು ತರಬಹುದು. ನಾವಾಡುವ ಮಾತು ಎದುರಿಗಿರುವ ವ್ಯಕ್ತಿಗೆ ಕೋಪತರಿಸಿ ಆತ ನಮ್ಮ ಮೇಲೆ ದಾಳಿಗೆ ಇಳಿಯಬಹುದು. ಹಾಗಾಗಿ ಮಾತಿನ ಬಳಕೆಯಲ್ಲಿ ಎಲ್ಲ ಬಗೆಯ ಎಚ್ಚರ ಮತ್ತು ಹೊಣೆಗಾರಿಕೆ ಬಹಳ ಮುಖ್ಯ. ಸರ್ವಜ್ಞ ಮಾತಿನ ಮಹತ್ವವನ್ನು ಕುರಿತು ಹೀಗೆ ಹೇಳುತ್ತಾನೆ.

* **ಮಾತು ಮಾತಿಗೆ ಆತು । ಮಾತು ಕೋಟಿಗಳುಂಟು ।**
**ಮಾತಾಡಿ ಮನಕೆ ಮುನಿಸಕ್ಕು, ಮಾತಿನಲಿ ।**
**ಸೋತವನೆ ಜಾಣ ಸರ್ವಜ್ಞ॥**

* **ಮಾತು ಬಲ್ಲಹ ತಾನು । ಸೋತು ಹೋಹುದು ಲೇಸು ।**
**ಮಾತಿಂಗೆ ಮಾತು ಮಥಿಸಲ್ಕೆ, ವಿಧಿ ಬಂದು ।**
**ಆತುಕೊಂಡಿಹುದು ಸರ್ವಜ್ಞ॥**

* **ಹೊತ್ತಿಗೊದಗದ ಮಾತು । ಹತ್ತು ಸಾಸಿರ ವ್ಯರ್ಥ ।**
**ಕತ್ತೆ ಕೂಗಿದರೆ ಫಲವುಂಟು, ಬರಿಮಾತು**
**ಕತ್ತೆಗು ಕಷ್ಟ ಸರ್ವಜ್ಞ**

ಒಮ್ಮೊಮ್ಮೆ ನಮಗರಿವಿಲ್ಲದೆ ಆಡುವ ಒಂದು ಮಾತು ಕೋಪದ ಕಿಡಿ ಹೊತ್ತುವಂತೆ ಮಾಡಿ ಜಗಳಕ್ಕೆ ನಾಂದಿ ಹಾಡಿ ಸಾವಿನದವಡೆಗೆ ತಳ್ಳುವ ಸಂಭವವೂ ಉಂಟು. ಬುದ್ಧಿವಂತನಾದವನು ಮಾತಿಗೆ ಗಂಟುಬಿದ್ದು ಗೆಲ್ಲಬೇಕೆಂಬ ಹಠಕ್ಕೆ ಬೀಳದೆ ಸೋಲನ್ನೊಪ್ಪಿಕೊಂಡು ಸುಮ್ಮನಾಗಿಬಿಡುತ್ತಾನೆ.

**ಮಾತಿನಿಂ ನಗೆನುಡಿಯು । ಮಾತಿನಿಂ ಹಗೆ ಕೊಲೆಯು**
**ಮಾತಿನಿಂ ಸರ್ವ ಸಂಪದವು ಲೋಕಕ್ಕೆ ।**
**ಮಾತೆ ಮಾಣಿಕವು ಸರ್ವಜ್ಞ**

ಮಾತು ಮನೋರಂಜನೆಯನ್ನು ತರಬಲ್ಲದು. ಅದೇ ಮಾತು ಕೊಲೆಗೆ ಕಾರಣವಾಗಬಹುದು. ಹಾಗಾಗಿ ಮಾತಿನ ಮಹತ್ವವನ್ನು ಇಂತಹ ಅನೇಕ ತ್ರಿಪದಿಗಳಲ್ಲಿ ಉದಾಹರಿಸಿದ್ದಾನೆ.

ಎಂಥ ಸಮಯದೇ ಬರಲಿ ಮನಸ್ಸು ಕುಗ್ಗಬಾರದು. ಸಮತೆಯಿಲ್ಲದ ಮನಸ್ಸಿನವರು ಏನನ್ನೂ ಸಾಧಿಸಲಾರರು. ಮಾನಸಿಕ ಆರೋಗ್ಯವನ್ನು ಮೊದಲು ಕೆಡಿಸುವುದು ಕೋಪ. ಈ ಕೋಪವನ್ನು ಗೆದ್ದವನು ಧೀರನೆಂದು ಸರ್ವಜ್ಞ ಒಪ್ಪುತ್ತಾನೆ.

**ಪಾಪವೆಂಬುದು ತಿಳಿಕೋಪವೇ ನೆಲಗಟ್ಟು**
**ಕೋಪದೊಳು ನೇಣು ಹರಿದಂತೆ ನರಕಕ್ಕೆ**
**ಕೋಪಿತಾನಿಳಿವ ಸರ್ವಜ್ಞ**

ಸರ್ವಜ್ಞ ಜನಸಾಮಾನ್ಯರ ಕವಿ. ತನ್ನ ಅನುಭವದ ನೆಲೆಗಟ್ಟಿನ ಮೇಲೆ ಕಂಡದ್ದನ್ನು ಕಂಡ ಹಾಗೆಯೇ ಹೇಳಿದ ನಿರ್ಭೀತಿ ನಿರ್ಭೀಡೆಯ ಕವಿ ಆತ. ಲೋಕಾನುಭವಿಯಾದ ಸರ್ವಜ್ಞ ತನ್ನ ವಚನಗಳಲ್ಲಿ ಮನುಷ್ಯ ಸ್ವಭಾವಗಳನ್ನು ಕುರಿತು ಸಮಾಜದ ರೀತಿನೀತಿಗಳನ್ನು ಕುರಿತು ನೂರಾರು ವಿಚಾರಗಳನ್ನು ಕುರಿತು ಮೌಲಿಕವಾದ ಮಾತುಗಳನ್ನಾಡಿದ್ದಾನೆ. ಆತನದ್ದು ಬರಿ ನೀತಿ ಕಾವ್ಯವಲ್ಲ. ಅನುಭವ, ನೀತಿ, ತತ್ವ, ಭಕ್ತಿ ಎಲ್ಲವೂ ಮಿಳಿತಗೊಂಡಿರುವ ಜೀವನ ಸತ್ಯ ಕಾವ್ಯ. ಒಟ್ಟಾರೆ ಸರ್ವಜ್ಞ ತನ್ನ ವಿಶಿಷ್ಟ ವ್ಯಕ್ತಿತ್ವದಿಂದ ಕನ್ನಡ ಜನಮನದಲ್ಲಿ ಮನೆ ಮಾಡಿಕೊಂಡಿದ್ದಾನೆ.

## ಗ್ರಂಥ ಋಣ :

೧. ಸರ್ವಜ್ಞನ ವಚನಗಳು–ಶ್ರೀ ಚನ್ನಪ್ಪ ಉತ್ತಂಗಿ,ಪ್ರಕಾಶ ಸಾಹಿತ್ಯ, ಬೆಂಗಳೂರು–೨೦೧೪

೨. ಸರ್ವಥಾ ಸರ್ವಜ್ಞ –ಡಾ. ನೀ.ಕೃ. ರಾಮಶೇಷನ್ (ಸಂ.) ತನುಮನು ಪ್ರಕಾಶನ, ಮೈಸೂರು–೨೦೦೯

೩. ಹೀಗೊಬ್ಬ ಸರ್ವಜ್ಞ–ಡಾ.ಎಸ್.ವಿದ್ಯಾಶಂಕರ್,ಪ್ರಿಯದರ್ಶಿನಿ ಪ್ರಕಾಶನ,ಬೆಂಗಳೂರು–೨೦೦೯.